* * *

ಮುಂದೆ ಯಮುನಕ್ಕ ತನ್ನನ್ನು ಸಾಕಲು ಕಷ್ಟಪಡುತ್ತಿದ್ದಳು. ಅವಳು ದೋಣಿ ಅಪಘಾತದಲ್ಲಿ ತೀರಿಕೊಂಡದ್ದು, ಪುರುಷೋತ್ತಮನ ದೋಸ್ತಿಯಾದದ್ದು, ತನ್ನ ಜೀವನ... ಸಾಲು ಹಚ್ಚಿ ಬಂದ ನೆನಪುಗಳಿಗೆ ಒಡ್ಡಿಕೊಳ್ಳುತ್ತ ಕೂತಾಗ ಸೀತಾರಾಮ ಬಂದು, 'ನೀನಿನ್ನು ಊಟಕ್ಕೆ ಹೋಗು. ರಾತ್ರಿ ನಾನಿಲ್ಲೇ ಮಲಗುತ್ತೇನೆ. ಮತ್ತೆ ನಾಳೆ ರಜೆ ಹಾಕುತ್ತಿಯೋ ನೋಡು' ಅಂದ.

ರಾಮಚಂದ್ರ ಮನೆಗೆ ತಲುಪುವಾಗ ಒಂಬತ್ತೂವರೆಯಾಗಿತ್ತು. ಹೋದ ತಕ್ಷಣ ನಾಗತ್ತೆ, ಡಾಕ್ಟರು ಇವನಿಗೆಲ್ಲಿಯಾದರೂ ಗರ್ಭಪಾತದ ಬಗ್ಗೆ ಹೇಳಿದರೋ ಎಂದು ಆತಂಕಗೊಂಡು 'ಡಾಕ್ಟರು ಸಿಕ್ಕಿದ್ದರೇ' ಮುಂತಾಗಿ ಮಾತಾಡತೊಡಗಿದಳು. 'ಬಚ್ಚಲಲ್ಲಿ ಬಿದ್ದ ನೆವಕ್ಕೆ ಹೀಗೆ ಹೊಟ್ಟೆಗೆ ಪೆಟ್ಟಾಗಬೇಕೇ. ಮುಖ್ಯ ನಮ್ಮ ನಸೀಬ ಸಮ ಇಲ್ಲ. ಆಗುವುದೇ ಆಗಿದ್ದರೆ ಯಾರಿಂದ ತಪ್ಪಿಸಲಿಕ್ಕಾಗುತ್ತದೆ...' ಅವಳ ಮಾತು ಕೇಳುತ್ತ ರಾಮಚಂದ್ರನಿಗೆ, ಮುದುಕಿ ತನ್ನ ಮೊಮ್ಮಗಳಿಗಾದದ್ದು ಗರ್ಭಪಾತ ಅಲ್ಲವೆಂಬುದನ್ನು ಸಾಬೀತುಪಡಿಸುವ ಜಾಲ ಎಸೆಯುತ್ತಿದ್ದಾಳೆಂದು ಹೊಳೆಯಿತು. ರೇವತಿ ನಡೆದದ್ದನ್ನೆಲ್ಲ ಹೇಳಿರಬಹುದು. ಇವರೆಲ್ಲ ಸೇರಿ ಏನೂ ಆಗದವರ ಹಾಗೆ ನಡೆದುಕೊಂಡು ತಾನು ಬಲಾತ್ಕರಿಸಿದ್ದೇ ಸುಳ್ಳು ಎಂದು ಸಾಧಿಸಲು ಹೆಣಗುತ್ತಿದ್ದಾರೆ. ಹೇಗೂ ಗರ್ಭ ಉಳಿದಿಲ್ಲ. ಇನ್ನು ತನ್ನ ಗರಜಿಲ್ಲ. ಹಾಗೇನಾದರೂ ಆಗದೇ ಬಸಿರು ಉಳಿಸಿದಿದ್ದರೆ ಆಗ ಕುಣಿಸುತ್ತಿದ್ದೆ ಇವರನ್ನು. ಈಗ ತಾನು ಮಾಡಿದ್ದೇ ಸುಳ್ಳಾಗಿ ಹೋಗುತ್ತದೆ. ಅವಳು ಕಾಲು ಜಾರಿ ಬಚ್ಚಲಲ್ಲಿ ಬಿದ್ದ ನೆವಕ್ಕೋ ಹೊಟ್ಟೆಗೆ ಪೆಟ್ಟಾಗಿ ಆಸ್ಪತ್ರೆಗೆ ಸೇರಿಸಿದೆವೆಂದು ಇವರೆಲ್ಲ ಜಗತ್ತನ್ನು ನಂಬಿಸಿ ಬಿಡುತ್ತಾರೆ. ನಾಗತ್ತೆ ಮಾತಾಡುತ್ತಲೇ ಇದ್ದಳು. 'ಊರಿಗೆ ಪತ್ರ ಬರೆಯಬೇಕು ಹೀಗಾಯಿತು ಅಂತ. ಶಾಂತೇರಿ ಕಾಮಾಕ್ಷಿಗೆ ಬಂದು ಉಡಿ ಹೇಳಿಕೊಂಡಿದ್ದೇನೆ. ನೀನೇನಾದರೂ ಪುರುಷೋತ್ತಮನಿಗೆ ಪತ್ರ ಬರೆಯುವುದಿದ್ದರೆ ಈ ಸುದ್ದಿಯನ್ನು ಮುದ್ದಾಂ ಬರೆ. ನಮ್ಮ ವೆಂಕಟೇಶ ಸಿಕ್ಕಿದರೆ ತಿಳಿಸಲು ಹೇಳು... ಅಥವಾ ಬೇಡ ಬಿಡು. ಸೀತಾರಾಮನಿಗೆ ಹೇಳಿ ಪತ್ರ ಬರೆಸುತ್ತೇನೆ...' ಅಬ್ಬಾ ಮುದುಕಿಯೇ ಅಂದುಕೊಂಡ.

ಊಟ ಮುಗಿಸಿದವನೇ ಪುರುಷೋತ್ತಮನಿಗೆ ಪತ್ರ ಬರೆಯಲು ಕೂತ. ರೇವತಿಯ ಗರ್ಭಪಾತದ ಬಗ್ಗೆ ಬರೆಯುತ್ತ ಅವಳು ಬಸಿರಾದದ್ದು ತನ್ನಿಂದಲೇ ಎಂದು ಒತ್ತಿ ಬರೆದಿದ್ದ. ದೊಡ್ಡಪ್ಪ, ಯಮುನಕ್ಕ ಇತ್ಯಾದಿ ಏನೇನು ಬರೆದನೋ, ಎಲ್ಲ ಮುಗಿಯುವಾಗ ಹನ್ನೆರಡೂವರೆಯಾಗಿತ್ತು. ಪತ್ರ ಹೀಗೇ ಮುಗಿಸಿದ್ದ– 'ಒಂದು ಅನುಭವವನ್ನು ಇದು ಹೀಗೆ ಎಂದು ನಿರ್ಧರಿಸೋದೇ ಕಷ್ಟ. ಎಲ್ಲ ಅನುಭಗಳು ಅಪೂರ್ಣವಾಗೇ ಬಳಿ ಬರುತ್ತವೆಯೋ. ಅವುಗಳ ಮುಂದಿನ ಭಾಗ ಯಾವಾಗಲಾದರೂ ಹಠಾತ್ತಾಗಿ ಉದ್ಭವಿಸಿಬಿಡುತ್ತವೆ. ಆಗ ಹೆಕ್ಕಿ ಒಂದಕ್ಕೂ ಇನ್ನೊಂದಕ್ಕೂ ಕೊಂಡಿ ಹಾಕಬೇಕು ನೋಡು...'

ತುಂಬ ಒಜ್ಜೆ ಮಾತುಗಳನ್ನು ಬರೆದೆ ಎಂದು ಅವನಿಗೇ ನಾಚಿಕೆಯಾಯಿತು. ಕೊನೆಗೊಮ್ಮೆ ಎಲ್ಲವನ್ನೂ ಓದುತ್ತ ಓದುತ್ತ ಓದುತ್ತ ರೇವತಿಗೆ ಗರ್ಭಪಾತ ಆಗಿದೆಯೋ ಇಲ್ಲವೋ ಎಂದು ಸಂದೇಹವಾಯಿತು. ಆಗಿರದೇ ಇದ್ದರೆ? ಕೊನೆಗೂ ತನ್ನ ಛಲ ಯಾರ ಮೇಲೆಂದು ತಿಳಿಯದೇ ಪತ್ರ ಹರಿದು ಹಾಕಲೇ ಬೇಡವೇ ಎಂದು ತೋಚದೇ ಕೂತ.